30
<del>36</del>

ಶ್ರೀ ಟಿ.ಎ. ಶರವಣ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು "ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ವಸತಿಯುತ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಸಿಬ್ಬಂದಿಗೆ ಕಳೆದ ಎರಡು ವರ್ಷಗಳಿಂದ ವೇತನ ನೀಡದೆ ವಿನಾಕಾರಣ ಶಾಲೆಯ ಅಧೀಕ್ಷಕರು ಗೊಂದಲವುಂಟು ಮಾಡಿ ವೇತನ ನಿಲ್ಲಿಸಿರುತ್ತಾರೆ. ಈ ಬಗ್ಗೆ ನೌಕರರಿಗೆ ಕೂಡಲೇ ವೇತನ ಬಿಡುಗಡೆ ಮಾಡುವಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶವಾಗಿದ್ದರೂ ಸಹ, ವೇತನ ಬಿಡುಗಡೆ ಮಾಡದೆ, ನೌಕರರಿಗೆ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ತೊಂದರೆ ನೀಡುತ್ತಿದ್ದಾರೆ. ಇದರಿಂದ ವೇತನವಿಲ್ಲದೆ ತೀವ್ರ ತೊಂದರೆಯಲ್ಲಿರುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ನಿರಂತರ ಮನವಿ ಸಲ್ಲಿಸಿದ್ದಾಗ್ಯೂ ಈವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕೂಡಲೇ ನ್ಯಾಯಾಲಯದ ಆದೇಶದಂತೆ ವೇತನ ಬಿಡುಗಡೆ ಮಾಡಲು ಮತ್ತು ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ" ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಂಸಧ್ವನಿ ಕಿವುಡ ಮಕ್ಕಳ ಶಾಲೆಯಲ್ಲಿ ಪ್ರಸ್ತುತ 05 ಜನ ಶಿಕ್ಷಕ ಸಿಬ್ಬಂದಿಗಳು ಹಾಗೂ 02 ಶಿಕ್ಷಕೇತರ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ಶಿಕ್ಷಕೇತರ ಸಿಬ್ಬಂದಿಯಾದ ಶ್ರೀ ಯೋಗಮೂರ್ತಿ ಇವರು ವೈದ್ಯಕೀಯ ಕಾರಣಗಳಿಗಾಗಿ ದಿನಾಂಕ:06.03.2018ರಿಂದ ದಿನಾಂಕ:19.12.2018ರ ವರೆಗೆ ಒಟ್ಟು 289 ದಿನಗಳು ಕರ್ತವ್ಯಕ್ಕೆ ಗೈರು ಹಾಜರಾಗಿದ್ದ ಹಿನ್ನೆಲೆಯಲ್ಲಿ ವೈದ್ಯಕೀಯ ಕಾರಣಗಳ ನೈಜತೆಯ ಕುರಿತು ವರದಿಯನ್ನು ನೀಡಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಶಾಲೆಯ ಅಧೀಕ್ಷಕರು ಪತ್ರವನ್ನು ಬರೆದಿದ್ದು, ವೈದ್ಯಕೀಯ ಮಂಡಳಿಯಿಂದ ಶ್ರೀ ಯೋಗಮೂರ್ತಿಯವರ ದಿನಾಂಕ:06.03.2018ರಿಂದ ದಿನಾಂಕ:19.12.2018ರ ವರೆಗಿನ ಗೈರು ಹಾಜರಿಯನ್ನು ವೈದ್ಯಕೀಯ ರಜೆಯೆಂದು ಪರಿಗಣಿಸುವಂತೆ ತಿಳಿಸಿರುವುದರಿಂದ ಶ್ರೀ ಯೋಗಮೂರ್ತಿ ಇವರಿಗೆ ವೇತನವನ್ನು ಪಾವತಿಸುವ ಬಗ್ಗೆ ನಿರ್ದೇಶನವನ್ನು ನೀಡಲು ಶಾಲೆಯ ಅಧೀಕ್ಷಕರು ಕೋರಿದ ಹಿನ್ನೆಲೆಯಲ್ಲಿ ನಿರ್ದೇಶನಾಲಯದ ದಿನಾಂಕ:21.03.2019 ಮತ್ತು 14.08.2019ರ ಪತ್ರಗಳಲ್ಲಿ ವೈದ್ಯಕೀಯ ಮಂಡಳಿಯಿಂದ ನೀಡಲಾದ ವರದಿಯ ಆಧಾರದ ಮೇಲೆ ಹಾಗೂ ಕೆ.ಸಿ.ಎಸ್.ಆರ್ ನಿಯಮಾವಳಿಗಳು ಮತ್ತು 1982ರ ರಾಜ್ಯ ಅನುದಾನ ಸಂಹಿತೆಯ ನಿಯಮಾನುಸಾರ ಪರಿಶೀಲಿಸಿ ಶ್ರೀ ಯೋಗಮೂರ್ತಿ ಇವರಿಗೆ ವೇತನವನ್ನು ಪಾವತಿಸಲು ಶಾಲೆಯ ಅಧೀಕ್ಷಕರಿಗೆ ಸೂಚಿಸಲಾಗಿರುತ್ತದೆ.

ಈ ಮಧ್ಯೆ ಶ್ರೀ ಯೋಗಮೂರ್ತಿಯವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಕರಣವನ್ನು (ಪ್ರಕರಣ ಸಂಖ್ಯೆ:1255/2019) ದಾಖಲಿಸಿ ತಡೆಹಿಡಿಯಲಾಗಿರುವ ತಮ್ಮ ವೇತನವನ್ನು ಪಾವತಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲು ಕೋರಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ:23.08.2019ರಂದು ಆದೇಶವನ್ನು ಹೊರಡಿಸಿ ಶ್ರೀ ಯೋಗಮೂರ್ತಿ ಇವರಿಗೆ ಮಾರ್ಚ್ 2018ರಿಂದ ಡಿಸೆಂಬರ್ 2018ರವರೆಗೆ ವೇತನವನ್ನು ಪಾವತಿಸುವಂತೆ ತಿಳಿಸಲಾಗಿರುತ್ತದೆ.

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ದಿನಾಂಕ:23.08.2019ರ ಆದೇಶದ ಕುರಿತು ಸರ್ಕಾರಿ ವಕೀಲರು ತಮ್ಮ ಅಭಿಪ್ರಾಯವನ್ನು ನೀಡಿ ಸದರಿ ಪ್ರಕರಣವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಲು ಸೂಕ್ತವಾದ ಪ್ರಕರಣವಾಗಿದೆ ಎಂಬುದಾಗಿ ತಿಳಿಸಿರುತ್ತಾರೆ.

ಸರ್ಕಾರಿ ವಕೀಲರು ನೀಡಿದ ಅಭಿಪ್ರಾಯದನ್ವಯ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ರಿಟ್ ಅರ್ಜಿ ಸಂಖ್ಯೆ:46/2020ರಲ್ಲಿ ದಾಖಲಿಸಲಾಗಿ, ಮಾನ್ಯ ಉಚ್ಚ ನ್ಯಾಯಾಲಯವು ಅರ್ಜಿಯನ್ನು ವಜಾಗೊಳಿಸಿ ದಿನಾಂಕ:28.01.2020ರಂದು ಆದೇಶ ಹೊರಡಿಸಿದ್ದು, ಈ ಆದೇಶ ತಲುಪಿದ 08 ವಾರದೊಳಗೆ ಶ್ರೀ ಯೋಗಮೂರ್ತಿಯವರಿಗೆ ವೇತನವನ್ನು ಪಾವತಿಸುವಂತೆ ತಿಳಿಸಲಾಗಿರುತ್ತದೆ.

ಶಾಲೆಯ ಹಿಂದಿನ ಅಧೀಕ್ಷಕರು ವಜಾಗೊಂಡು ಕರ್ತವ್ಯದಿಂದ ಬಿಡುಗಡೆ ಹೊಂದಿದ್ದು, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಅಧೀಕ್ಷಕರು ದಿನಾಂಕ:25.02.2020ರ ಪತ್ರದಲ್ಲಿ ತಿಳಿಸಿರುವಂತೆ ಶ್ರೀ ಯೋಗಮೂರ್ತಿಯವರನ್ನು ಹೊರತುಪಡಿಸಿ ಶಾಲೆಯ ಎಲ್ಲಾ ಸಿಬ್ಬಂದಿಗಳಿಗೆ ಜನವರಿ–2020ರ ಮಾಹೆಯವರೆಗೆ ವೇತನವನ್ನು ಪಾವತಿಸಲಾಗಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ ಶ್ರೀ ಯೋಗಮೂರ್ತಿ ಇವರಿಗೆ ವೇತನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಮಮಇ 65 ಎಸ್‌ಜೆಡಿ 2020(ಭಾಗ–1)

(ಶಶಿಕಲಾ ಅ.ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು.